3

ಎದ್ದು ನಡೆದನು ಶಿಷ್ಯ ಊರ ಹೊರಗೆ
ಪಡುವಲದ ಎಡೆಗೆ
ದಾರಿ ಮಧ್ಯದ ದಾರಿ ಕವಲು ದಾರಿ
ದಾರಿ ತಪ್ಪಿದ ದಾರಿ
ದಿಗಿಲುಗೊಂಡನು ಶಿಷ್ಯ ಮುಂದೆ
ಗಡಂಗಿಗೆ ಹೋಗಲಾರದ ಹೆಜ್ಜೆ
ಜಗ್ಗುತ್ತಿದೆ ಹಿಂದೆ ಮುಂದೆ
ಜಗ್ಗಿದಂತೆಯೆ ಹೆಜ್ಜೆ ಹಿಂದೆ ಹಿಂದೆ.

ಧಾವಿಸಿದ ಶಿಷ್ಯನಿಗೆ ಕಂಡದ್ದು ಕಣ್ಣಳತೆ
ಅವ್ವನ ಪದತಲದಲ್ಲಿ ಅವನತಮುಖಿ ಕಂದ
ಗುರು ಗೋವಿಂದ ಗೋವಿಂದ ಗೋವಿಂದಾ
ಬೆಬ್ಬಳಿಸಿದ ನೋಟ ತಾಯಿಯತ್ತ ತದೇಕ ಚಿತ್ತ
ಕಣ್ಣನುಪ್ಪಿನ ಹನಿಗೆ ದೀಪ ಮಿಂಚಿನ ಸಾಕ್ಷಿ.



ತಾಯ ಮುಖವನ್ನೊಮ್ಮೆ ಕಾಣದ
ಗುರುಮುಖವನಿನ್ನೊಮ್ಮೆ
ನೋಡಿದ ನೋಡೇ ನೋಡಿದ
ಆಟ ಸಂಕರವಾಗಿ
ಶಂಕರಿ ಮೋಹದ ನತ್ತು
ಕೈಯ್ಯೊಳಗೆ ಹ್ಯಾಂಗದು ಸಿಗೆಬಿತ್ತು!
ಹಾಡಿದ ಹಾಡೇ ಹಾಡಿದ ಶಿಶುನಾಳ.

4

ನತ್ತು ನತ್ತು ನತ್ತು ಶಂಕರಿ ಮೋಹದ ನತ್ತು
ನನ್ನ ಕೈಯೊಳಗೆ ಹ್ಯಾಂಗದು ಸಿಗೆಬಿತ್ತು
ಕಳಸದ ಮುತ್ತೈದೆ ದ್ಯಾಮವ್ವನ ನತ್ತು
ನತ್ತು ನತ್ತೆಂದರೆ ಅಂತಿಂಥ ನತ್ತಲ್ಲ.

ಹಾರುವರ ಕೇರ್‍ಯಾಗೆ ಕೇಳುವರಿಲ್ಲದೆ ಇತ್ತು
ನಾಗಲಿಂಗನ ಕೂಡೆ ಹುಚ್ಚುಗೊಟ್ಟೆ ತಾನಾಡಿ
ಗುಡಿ ಗುಡಿ ಗುಂಡಿಗೆ ಬಡಿದಾಡುತಿತ್ತು
ಸಾಬೀಯ ಕೈಯಾರೆ ಸುಖನಿದ್ರೆಯೊಳ ಬಿತ್ತು

ಮೂಗುತಿ ಮುಂಭಾರ ಜಡೆ ಗಂಟು ಹಿಂಭಾರ
ಮರುಳ ಶಂಕರಿ ನಾರಿ ಹಿತವೆನುತಿತ್ತು
ಇಹವೆಂದರೆ ತೇಗೆಂದು ಪರವೆಂದರೆ ಹಸಿವೆಂದು
ಒಳಗೀನ ದ್ಯಾಮವ್ವಗೆ ಗುಂಡಾರ ಗುಡಿ ಕಟ್ಟಿಸಿತ್ತು.

ಹುಚ್ಚುಗೊಟ್ಟೆ ಅಲ್ಲಮನ ಹುಚ್ಚೆ ತಾನಾಗಿತ್ತು
ಕದಳೀಯ ಬನದೊಳಗೆ ಕಾಲಾಡಿ ಬಂದಿತ್ತು
ಅಕ್ಕಾನ ನುಂಗಿತ್ತು ಆರಬೀಯ ಕಳೆದಿತ್ತು
ಬೆಳಗಾನೆ ಹೊದ್ದಿತ್ತು ಬಯಲೇ ತಾನಾಗಿತ್ತು

ನತ್ತು ನತ್ತು ನತ್ತು ಶಂಕರಿ ಮೋಹದ ನತ್ತು
ಸಂತೆಯ ಮುಗಿಸಿ ಗಂಟು ಕಟ್ಟಿದ ಹೊತ್ತು
ಶಿಶುನಾಳನ ಕೈಯಾಗೆ ಹ್ಯಾಂಗದು ಸಿಗೆಬಿತ್ತು
ನತ್ತು ನತ್ತು ನತ್ತು ಅಭಯಂಕರಿ ತಾನೆನಿಸಿತ್ತು.